ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ. ಹಾರಂಗಿ ಅಣೆಕಟ್ಟೆಯಲ್ಲಿ ನಾಲೆಗೆ ನೀರು ಬಿಡುವ ಸಲುವಾಗಿ ಹೊಸದಾಗಿ ಯಾವುದೇ ಗೇಟುಗಳನ್ನು ಅಳವಡಿಸಿರುವುದಿಲ್ಲ. ಹಾರಂಗಿ ಡ್ಯಾಂ ವಿಭಾಗದ ಉಗ್ರಾಣದಲ್ಲಿದ್ದ ವೈರ್ ರೋಪ್‌ಗಳನ್ನು ಉಪಯೋಗಿಸಿ ದುರ್ಬಲವಾಗಿದ್ದ ವೈರ್ ರೋಪ್‌ಗಳನ್ನು ಬದಲಾಯಿಸಲಾಗುತ್ತಿದೆ. ಇದುವರೆವಿಗೆ ಯಾವುದೇ ಹಣ ವೆಚ್ಚವಾಗಿರುವುದಿಲ್ಲ.

ಆ. ರಿವರ್ ಸ್ಲೂಯಿಸ್ ಗೇಟುಗಳಿಗೆ ರೋಲರ್ ಅಸೆಂಬ್ಲಿಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.

ತುಂಗಾ ಮೇಲ್ದಂಡೆ ಯೋಜನೆಗೆ ನಿಗದಿ ಮಾಡಿರುವ ಹಣ.

2096(2702) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಮೇಲ್ದಂಡೆ ಯೋಜನೆಗೆ ಒಟ್ಟು ನಿಗದಿಮಾಡಿರುವ ಹಣ ಎಷ್ಟು?

ಆ) ಇದುವರೆವಿಗೂ ಖರ್ಚು ಮಾಡಿರುವ ಹಣ ಎಷ್ಟು?

ಇ) ತುಂಗಾ ಅಣೆಕಟ್ಟು ಗುತ್ತಿಗೆ ಕರಾರಿನಂತೆ ಪೂರ್ಣಗೊಳಿಸಬೇಕಾದ ಅವಧಿ ಯಾವುದು?

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ತುಂಗಾ ಮೇಲ್ದಂಡೆ ಯೋಜನೆಗೆ 2001-2002ನೇ ಸಾಲಿನ ದರಗಳಂತೆ ರೂ. 915.35 ಕೋಟಿ ಹಣ ಬೇಕಾಗುವುದಾಗಿ ಅಂದಾಜಿಸಲಾಗಿದೆ.

ಆ) ಪ್ರಾರಂಭದಿಂದ ಇದುವರೆವಿಗೂ ಒಟ್ಟು ರೂ.111.17 ಕೋಟಿ ಹಣ ಖರ್ಚು ಮಾಡಲಾಗಿದೆ.

ಇ) ತುಂಗಾ ಮೇಲ್ದಂಡೆ ಯೋಜನೆಯ ಅಣೆಕಟ್ಟು ಕಾಮಗಾರಿಯ ಟೆಂಡರ್ ಕರಾರಿನಂತೆ ಅಣೆಕಟ್ಟೆಯನ್ನು ಫೆಬ್ರುವರಿ 2002ರ ವೇಳೆಗೆ ಪೂರ್ಣಗೊಳಿಸಬೇಕಾಗಿದೆ.

ರಾಜ್ಯದಲ್ಲಿರುವ ಜಲಸಂವರ್ಧನೆ ಯೋಜನೆ ಪ್ರಕಾರ ಇರತಕ್ಕ ಸಂಘಟಿತವಾದ ನೀರು ಬಳಕೆದಾರರ ಸಹಕಾರ ಸಂಘಗಳು.

2308(2766) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಲಸಂವರ್ಧನೆ ಯೋಜನೆಯಂತೆ ರಾಜ್ಯದಲ್ಲಿ ಸಂಘಟಿತವಾದ ನೀರು ಬಳಕೆದಾರರ ಸಹಕಾರ ಸಂಘಗಳು ಎಷ್ಟು ಈ ಸಂಘಗಳ ಕಾರ್ಯವ್ಯಾಪ್ತಿ ಏನು;

ಆ) ಇನ್ನೂ ಮುಂದೆ ಪ್ರತಿಯೊಂದು ಕೆರೆಗೂ ಒಂದೊಂದು ಸಂಘ ರಚಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಇ) ಇದುವರೆವಿಗೂ ಈ ಯೋಜನೆಯಲ್ಲಿ ಎಷ್ಟು ಕೆರೆಗಳ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ;

ಈ) ಇದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣವೆಷ್ಟು

ಉ) ಇದುವರೆವಿಗೂ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

ಅ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಇದುವರೆಗೆ 571 ಸಣ್ಣ ನೀರಾವರಿ ನೀರು ಬಳಕೆದಾರರ ಸಹಕಾರ ಸಂಘಗಳನ್ನು ನೋಂದಾಯಿಸಿದ್ದು ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ. ಜಲಸಂವರ್ಧನೆ ಯೋಜನೆ ಪ್ರಕಾರ ಸಂಘ

ಆ) ಸಂಘ ರಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಇದುವರೆಗೆ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲ.

ಈ) ಹತ್ತು ಕೋಟಿ ರೂ. ನಿಗದಿಪಡಿಸಲಾಗಿದೆ.

ಉ) ಕಾಮಗಾರಿಗಳು ಇನ್ನೂ ಪ್ರಾರಂಭವಾಗಿಲ್ಲವಾದ್ದರಿಂದ ವೆಚ್ಚ ಆಗಿರುವುದಿಲ್ಲ.

ಮಂಡ್ಯ ನಗರಕ್ಕೆ ಕಾವೇರಿ ೨ನೇ ಹಂತದ ಕುಡಿಯುವ ನೀರು ಪೂರೈಕೆ.

2310(2861) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮಂಡ್ಯ ನಗರದ ನಿವಾಸಿಗಳಿಗೆ ಕಾವೇರಿ ನದಿ ನೀರಿನ 2ನೇ ಹಂತದ ಕುಡಿಯುವ ನೀರು ಸರಬರಾಜಿಗಾಗಿ ಯೋಜನೆಯನ್ನು ಸರ್ಕಾರ ಚಾಲನೆ ಮಾಡಿದೆಯೇ?

2.ಹಾಗಿದ್ದಲ್ಲಿ 2ನೇ ಹಂತದ ಯೋಜನೆ ಆರಂಭಗೊಂಡಿದ್ದರೂ ಮಂಡ್ಯ ನಗರದ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಕ್ಕೆ ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—